<u>ಪ್ರಥಮ ದರ್ಜೆಯ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ ಹಾನಗಲ್</u>

**<u>ಸಿ. ಸಿ. ನಂ.151/2023</u>**

| | | | | |
|---|---|---|---|---|
| ಸಾಕ್ಷಿಧಾರರ ಹೆಸರು | : | ಶಂಭುಲಿಂಗ ಮಟ್ಟಿಮನಿ | ಪಿಡಬ್ಲ್ಯೂ | 2 |
| ತಂದೆ:ಗಂಡನ ಹೆಸರು | : | ಚನ್ನಪ್ಪ | ಸಿಡಬ್ಲ್ಯೂ | 2 |
| ವಯಸ್ಸು | : | 30 ವರ್ಷ | | |
| ಉದ್ಯೋಗ | : | ಖಾಸಗಿ ನೌಕರಿ | | |
| ವಾಸಸ್ಥಳ | : | ಹಾನಗಲ್ | | |

<u>ದಿನಾಂಕ 19-03-2024 ರಂದು ಸಾಕ್ಷಿಧಾರರಿಗೆ ಪ್ರಮಾಣ ವಚನ ಬೋಧಿಸಲಾಯಿತು.</u>

<u>ಮುಖ್ಯ ವಿಚಾರಣೆ: ಸಹಾಯಕ ಸರಕಾರಿ ಅಭಿಯೋಜಕರಿಂದ</u>

ನ್ಯಾಯಾಲಯದ ಮುಂದಿರುವ ಆರೋಪಿ ಗೊತ್ತು. ಸಾಕ್ಷಿ ನಿ ಪಿ 1 ರ ಮಹಜರು, ನಿ ಪಿ 2 ರ ಶೋಧನಾ ಸಮುಚಿತ ಆಧಾರ ವರದಿ, ನಿ ಪಿ 3 ರ ಸ್ವತ್ತುಗಳ ಪಟ್ಟಿ ನಿ ಪಿ 4 ರ ಮಾದರಿ ಮೊಹರಿನ ಚೀಟಿಗಳಲ್ಲಿ ತನ್ನ ಸಹಿಗಳನ್ನು ಗುರುತಿಸಿದ್ದು ಸಾಕ್ಷಿಯ ಸಹಿಯನ್ನು ನಿ ಪಿ 1(ಬಿ) ಯಿಂದ ನಿ ಪಿ 4(ಬಿ) ಎಂದು ಗುರುತಿಸಲಾಯಿತು. ಸದರಿ ಸಹಿಗಳನ್ನು ನಾನು ಸುಮಾರು ಆರು ತಿಂಗಳ ಹಿಂದೆ ಅಬಕಾರಿ ಕಚೇರಿ ಹತ್ತಿರ ಇರುವ ಅಂಗಡಿಯ ಹತ್ತಿರ ಹಾಕಿದ್ದೇನೆ. ನಿ ಪಿ 1 ರಿಂದ 4 ರಲ್ಲಿ ಏನ ಬರೆಯಲಾಗಿದೆ ಎಂದು ನನಗೆ ಗೊತ್ತಿಲ್ಲ. ನನ್ನ ಸಮಕ್ಷಮ ಅಬಕಾರಿ ಅಧಿಕಾರಿಗಳು ಯಾವುದೇ ಮುದ್ದೆಮಾಲನ್ನು ಜಪ್ತಿ ಮಾಡಿಕೊಂಡಿಲ್ಲ. ನ್ಯಾಯಾಲಯದ ಮುಂದಿರುವ ಮು ಮಾ 1 ನ್ನು ಈ ಹಿಂದೆ ನೋಡಿಲ್ಲ.

(ಈ ಹಂತದಲ್ಲಿ ಸಹಾಯಕ ಸರಕಾರಿ ಅಭಿಯೋಜಕರು ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿಯನ್ನಾಗಿ ಪರಿಗಣಿಸಿ ಪಾಟೀ ಸವಾಲು ಮಾಡಲು ಅನುಮತಿ ಕೋರಿದ್ದು ಪಾಟೀ ಸವಾಲಿಗೆ ಅನುಮತಿ ನೀಡಲಾಯಿತು)

<u>: ಪಾಟೀ ಸವಾಲು : ಸಹಾಯಕ ಸರಕಾರಿ ಅಭಿಯೋಜಕರಿಂದ</u>

20-9-2022 ರಂದು ಅಬಕಾರಿ ಅಧಿಕಾರಿಗಳು ನನ್ನ ಮತ್ತು ಚಾ ಸಾ 3 ರವರ ಸಮಕ್ಷಮ ಹಾನಗಲ್ - ತಡಸ ರಾಜ್ಯ ಹೆದ್ದಾರಿ ಪಕ್ಕದಲ್ಲಿರುವ ಶ್ರೀ ರೇಣುಕಾ ದಾಬಾದ ಒಳಗೆ ಕ್ಯಾಶ ಕೌಂಟರ ಪಕ್ಕದಿಂದ ತಲಾ 90 ಎಮ್ ಎಲ್ ನ ಒಟ್ಟು 22 ಓರಿಜಿನಲ್

ಚಾಯ್ಸ ಕವಿಸ್ಕಿಯ ಟೆಟ್ರಾ ಪ್ಯಾಕುಗಳು, ತಲಾ 90 ಎಮ್ ಎಲ ನ ಒಟ್ಟು 12 ಓಲ್ಡ ಟಾವರಿನ ವಿಸ್ಕಿಯ ಟೆಟ್ರಾ ಪ್ಯಾಕುಗಳು, ತಲಾ 650 ಎಮ ಎಲ್ ನ ಒಟ್ಟು 14 ಟೋಬರಗ ಬಯರಿನ ಬಾಟಲಿಗಳು, ತಲಾ 330 ಎಮ ಎಲ್ ನ ಒಟ್ಟ 6 ನಾಕ ಔಟ್ ಹೈ ಪಂಚ್ ಬಿಯರ್ ಕ್ಯಾನುಗಳನ್ನು ಜಪ್ತಿಮಾಡಿಕೊಂಡು ಮಧ್ಯಾಹ್ನ 12-30 ರಿಂದ 1-30 ರವರೆಗೆ ನಿ ಪಿ 1 ರ ಮಹಜರು ಕ್ರಮ ಜರುಗಿಸಿ ಅದಕ್ಕೂ ಪೂರ್ವದಲ್ಲಿ ನಿ ಪಿ 2 ರ ಶತೋಧನಾ ಸಮುಚಿತ ಆಧಾರ ವರದಿ ತಯಾರಿಸಿ ನಂತರ ನಿ ಪಿ 3 ರ ಜಪ್ತಿ ಮಾಡಿಕೊಂಡ ವಸ್ತುಗಳನ್ನು ತಯಾರಿಸಿ, ನಿ ಪಿ 4 ರಂತೆ ಮಾದರಿ ಮೊಹರಿನ ಚೀಟಿಯನ್ನು ತಯಾರಿಸಿದರು ಎಂದರೆ ಸರಿಯಲ್ಲ. ನನಗೆ ನಿ ಪಿ 1 ರಿಂದ 4 ರ ಬಗ್ಗೆ ಸಂಪೂರ್ಣ ಮಾಹಿತಿ ಇದ್ದರೂ ಸಹ ಹಾಗೂ ಮು ಮಾ 1 ನ್ನು ನೋಡಿ ಗುರುತಿಸಲು ಆಗುತ್ತಿದ್ದರೂ ಸಹ ಆರೋಪಿ ನನಗೆ ಪರಿಚಯ ಇರುವ ಕಾರಣ ಆತನಿಗೆ ಸಹಾಯ ಮಾಡಲು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

<u>ಪಾಟೀ ಸವಾಲು ಆರೋಪಿ ಪರ ಶ್ರೀ.ಆರ್ ಕೆ ಕೆ ಪರ ಶ್ರೀ. ಪಿ ಎಮ್ ಜೆ ವಕೀಲರಿಂದ</u>

(ಇಲ್ಲ ಎನ್ನುತ್ತಾರೆ )

<u>: ಮರುವಿಚಾರಣೆ : ಇಲ್ಲ.</u>

( ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು)

ನ. ಸ. ಓ. ಹೇ. ಕೆ ಸರಿ ಇದೆ
ಎಂದು ಒಪ್ಪಿರುತ್ತಾರೆ.

**Sd/-**

ಹಿರಿಯ ಸಿವಿಲ್ ನ್ಯಾಯಾಧೀಶರು
ಹಾನಗಲ್